**ಜೊಲ್ಲೆ ಗ್ರುಪ್**

**ವಾರ್ತಾ ಪತ್ರ**

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

**ನವೆಂಬರ್ 2024–ಸಂಪುಟ–8 ಸಂಚಿಕೆ–11**


# ದರ್ಪಣ



## 62ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ

**ಚಿಕ್ಕೋಡಿ ಮಾಜಿ ಸಂಸದರು ಹಾಗೂ ಜೊಲ್ಲೆ ಗ್ರುಪ್ ಸಂಸ್ಥಾಪಕರು**

ನಿಪ್ಪಾಣಿಯ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಚಿಕ್ಕೋಡಿ ಲೋಕಸಭಾ ಮಾಜಿ ಸಂಸದರು ಹಾಗೂ ಜೊಲ್ಲೆ ಗ್ರುಪ್ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರ 62ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಪಾಲ್ಗೊಂಡ ಕೊಲ್ಲಾಪೂರ ರಾಜ್ಯಸಭಾ ಸದಸ್ಯ ಶ್ರೀ. ಧನಂಜಯ ಮಹಾಡಿಕ ಅವರು ಶ್ರೀ. ಅಣ್ಣಾಸಾಹೇಬ ಜೊಲ್ಲೆಯವರು ಸಹಕಾರಿ ಕ್ಷೇತ್ರದಲ್ಲಿ ಹೊಸ, ಹೊಸ ಬೆಳವಣಿಗೆಯನ್ನು ತಮ್ಮ ಸಂಸ್ಥೆಯಲ್ಲಿ ಅಳವಡಿಸಿಕೊಂಡು ಮುನ್ನಡೆಸುತ್ತಿರುವ ಮೇಧಾವಿಯಾಗಿದ್ದಾರೆ. ದಿನಕ್ಕೊಂದು ಹೊಸ ಹೊಸ ಯೋಜನೆ ರೂಪಿಸುವ ಕಾರ್ಯಕ್ಷಮತೆ ಹೊಂದಿದ್ದು, ಅವರೊಬ್ಬ ದೂರದೃಷ್ಟಿ ನಾಯಕ. ಸಹಕಾರ, ಶಿಕ್ಷಣ, ಕೃಷಿ, ಕಲೆ, ಕ್ರೀಡೆ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಗಣನಿಯ ಸಾಧನೆಯನ್ನು ಮಾಡಿದ್ದಾರೆ. ಕರ್ನಾಟಕ–ಮಹಾರಾಷ್ಟ್ರ ಗಡಿ ಭಾಗದಲ್ಲಿ ಸಮಾಜಮುಖಿ ಕೆಲಸ ಮಾಡುವ ಮೂಲಕ ಜನರ ಅಭಿಮಾನ ಪ್ರೀತಿ ಮತ್ತು ವಿಶ್ವಾಸ ಗಳಿಸಿದ್ದಾರೆ.

ರಾಷ್ಟ್ರೀಕೃತ ಬ್ಯಾಂಕಿನ ವ್ಯವಸ್ಥೆ ಇಲ್ಲದ ಸ್ಥಳಗಳಲ್ಲಿ ಬೀರೇಶ್ವರ ಸೊಸಾಯಟಿ ಶಾಖೆಗಳನ್ನು ಸ್ಥಾಪಿಸಿ ಬಡ ಜನರಿಗೆ ಆರ್ಥಿಕ ಸೌಲಭ್ಯ ಒದಗಿಸಿರುವ ಕೀರ್ತಿ ಜೊಲ್ಲೆ ದಂಪತಿಗೆ ಸಲ್ಲುತ್ತದೆ. ಬೀರೇಶ್ವರ ಬ್ಯಾಂಕಿನ ವ್ಯವಸ್ಥೆಯಲ್ಲಿ ಸಿಲಿಕಾನ್ ಸಿಟಿಯಲ್ಲಿರುವ ವ್ಯವಸ್ಥೆ ಗ್ರಾಮೀಣ ಭಾಗದ ಶಾಖೆಗಳಲ್ಲಿ ಅಳವಡಿಸಿ ಬೀರೇಶ್ವರ ಸಂಸ್ಥೆಯನ್ನು ಹೆಮ್ಮರವಾಗಿ ಬೆಳೆಸಿದ್ದಾರೆ. ಇದೇ ಸಂದರ್ಭದಲ್ಲಿ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಹಂಗಾಮಿಗೆ ಚಾಲನೆ ನೀಡಿ, ಅಳಿವಿನಂಚಿನಲ್ಲಿದ್ದ ನಿಪ್ಪಾಣಿ ಹಾಲ ಶುಗರ್ ಕಾರ್ಖಾನೆಯನ್ನು ಸಹ ಇಂದು ಹೆಮ್ಮರವಾಗಿ ಬೆಳೆಸಿದ್ದಾರೆ. ಮುಂದೆಯೂ ಸಹ ಹೆಚ್ಚಿನ ಅಭಿವೃದ್ಧಿ ಮಾಡುತ್ತಾರೆ ಎಂಬ ವಿಶ್ವಾಸ ಇದೆ. ರೈತರು ಅವರಿಗೆ ಸಹಕಾರ ಕೊಡಬೇಕು ಎಂದರು.

ಮಾಜಿ ಸಚಿವೆ ಸೌ. ಶಶಿಕಲಾ ಜೊಲ್ಲೆ ಮಾತನಾಡಿ, ಕಳೆದ 40 ವರ್ಷದಿಂದ ಸಮಾಜಮುಖಿ ಸೇವೆ ಮಾಡುತ್ತಿರುವ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರಿಗೆ ನಾಡಿನ ಜನರ ಆಶೀರ್ವಾದವೇ ಶ್ರೀರಕ್ಷೆಯಾಗಿದೆ. ಪ್ರತಿಯೊಬ್ಬರಿಗೂ ಸಾಲ ಸೌಲಭ್ಯ ಸಿಗಬೇಕೆಂದು ಸಹಕಾರಿ ರಂಗದ ಮೂಲಕ ಬೀರೇಶ್ವರ ಸೊಸೈಯಿಟಿ ಸ್ಥಾಪಿಸಿ ಇಂದು ಹೆಮ್ಮರವಾಗಿ ಬೆಳೆಸಿದ್ದಾರೆ. ಗಡಿ ಭಾಗದ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸಿ ಗಡಿ ಭಾಗದ ಜನರ ಹೃದಯ ಗೆದ್ದಿದ್ದಾರೆ ಎಂದರು.

ಮಾಜಿ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಸನ್ಮಾನ ಸ್ವೀಕರಿಸಿ ಮಾತನಾಡಿ, ನಿಪ್ಪಾಣಿಯಲ್ಲಿ ರೈತ ಹುತಾತ್ಮ ಸ್ಮಾರಕ ನಿರ್ಮಾಣ ಮಾಡಬೇಕೆಂಬ ಶ್ರೀ. ಅಚ್ಯುತ್ ಮಾನೆ ಅವರ ಬೇಡಿಕೆಗೆ ಜೊಲ್ಲೆ ಗ್ರುಪ್, ಕಾರ್ಖಾನೆ ಮತ್ತು ಶಾಸಕರ ಅನುದಾನದಲ್ಲಿ ಸ್ಮಾರಕ ನಿರ್ಮಾಣ ಮಾಡಲಾಗುತ್ತದೆ. ನನ್ನ ಜನ್ಮದಿನಕ್ಕೆ ಶುಭಾಶಯ ಕೋರಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.


ಕಿತ್ತೂರ ಮಾಜಿ ಶಾಸಕ ಶ್ರೀ. ಮಹಾಂತೇಶ ದೊಡ್ಡಗೌಡರ, ಖಾನಾಪುರ ಮಾಜಿ ಶಾಸಕ ಶ್ರೀ. ಅರವಿಂದ ಪಾಟೀಲ, ಸಕ್ಕರೆ ಕಾರ್ಖಾನೆ ಅಧ್ಯಕ್ಷ ಶ್ರೀ. ಎಂ. ಪಿ. ಪಾಟೀಲ ಅವರು ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರ ಸಮಾಜಮುಖಿ ಕೆಲಸಗಳನ್ನು ಗುಣಗಾನ ಮಾಡಿದರು.

ಚಿಕ್ಕೋಡಿ ಚರಮೂರ್ತಿಮಠದ ಪ.ಪೂ.ಶ್ರೀ. ಸಂಪಾದನಾ ಸ್ವಾಮೀಜಿ, ಹಂಚಿನಾಳದ ಪ.ಪೂ.ಶ್ರೀ. ಮಹೇಶಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ 62ನೇ ಜನ್ಮದಿನದ ನಿಮಿತ್ತ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರನ್ನು ಹುಟ್ಟು ಹಬ್ಬ ಆಚರಣ ಸಮಿತಿ ಮತ್ತು ವಿವಿಧ ಗಣ್ಯರು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ನಿಪ್ಪಾಣಿಯ ಸಮಾಧಿಮಠದ ಪ.ಪೂ.ಶ್ರೀ ಪ್ರಾಣಲಿಂಗ ಸ್ವಾಮೀಜಿ, ಖಡಕಲಾಟದ ಪ.ಪೂ.ಶ್ರೀ ಶಿವಬಸವ ಸ್ವಾಮೀಜಿ, ಶ್ರೀ. ಜ್ಯೋತಿಪ್ರಸಾದ ಜೊಲ್ಲೆ, ಮಾಜಿ ಶಾಸಕ ಶ್ರೀ. ಬಾಳಾಸಾಹೇಬ ವಡ್ಡರ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಶ್ರೀ. ಅಪ್ಪಾಸಾಹೇಬ ಕುಲಗೂಡೆ, ಶ್ರೀ. ಪಂಚನಗೌಡ ದ್ಯಾಮನಗೌಡರ, ಶ್ರೀ. ಅಪ್ಪಾಸಾಹೇಬ ಜೊಲ್ಲೆ, ಶ್ರೀ. ವಿಶ್ವನಾಥ ಕಮತೆ, ಶ್ರೀ. ಅವಿನಾಶ ಪಾಟೀಲ, ಶ್ರೀ. ರಾಮಗೊಂಡಾ ಪಾಟೀಲ, ಶ್ರೀ. ಸುಕುಮಾರ ಪಾಟೀಲ, ಸುಮಿತ ಸಾಸನೆ, ಜಯಕುಮಾರ ಖೋತ, ಪ್ರಕಾಶ ಶಿಂಧೆ, ಜಯವಂತ ಬಾಟಲೆ, ಮುಂತಾದ ಗಣ್ಯರು ಉಪಸ್ಥಿತರಿದ್ದರು. ಬಸವಜ್ಯೋತಿ ಫೌಂಡೇಶನ್ ಅಧ್ಯಕ್ಷ ಶ್ರೀ. ಬಸವಪ್ರಸಾದ ಜೊಲ್ಲೆ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)




### ನೂತನ ಶಾಖೆ ಉದ್ಘಾಟನೆ



ಗೋವಾ ರಾಜ್ಯದ ಮಡಗಾವ ನಗರದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ-ಮಡಗಾವ ನೂತನ ಶಾಖೆಯನ್ನು ಗೋವಾ ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ಮಡಗಾಂವ ಶಾಸಕರಾದ ಶ್ರೀ ದಿಗಂಬರ ಕಾಮತ, ಗೋವಾದ ಭಾರತೀಯ ಜನತಾ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ದಾಮು ಜಿ. ನಾಯಕ ಹಾಗೂ ಮಡಗಾಂವ ಮುನ್ಸಿಪಲ್ ಕೌನ್ಸಿಲ್ ಅಧ್ಯಕ್ಷರು ಶ್ರೀ ದಾಮೋದರ ಶಿರೋಡ್ಕರ ಅವರು ಉದ್ಘಾಟಿಸುತ್ತಿರುವ ದೃಶ್ಯ.

## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

# ಐಟಿ ವಿಭಾಗದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ




ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಸಂಸ್ಥೆಗೆ ಉತ್ತರ ಪ್ರದೇಶ ರಾಜಧಾನಿ ಲಖನೌದಲ್ಲಿ ಜರುಗಿದ ರಾಷ್ಟ್ರಮಟ್ಟದ ಸಹಕಾರ ಬ್ಯಾಂಕುಗಳ (NCBS) ಹಾಗೂ FRONTIERSCO-OPERATIVE BANKING AWARDS-2024 ನಲ್ಲಿ ಬೆಳಗಾವಿ ಜಿಲ್ಲೆಯ ಪ್ರತಿಷ್ಠಿತ ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ) ಸಂಸ್ಥೆಗೆ ಐಟಿ ವಿಭಾಗದಲ್ಲಿ ರಾಷ್ಟ್ರಮಟ್ಟದ BEST IT HEAD AWARD 2024 ಪ್ರಶಸ್ತಿ ಲಭಿಸಿದೆ.

ಈ ಸಮಾರಂಭದಲ್ಲಿ ಬ್ಯಾಂಕಿಂಗ್ ಫಂಟಿಯರ್‌ನ ಸಂಸ್ಥಾಪಕ ಶ್ರೀ. ಬಾಬು ನೈಯರ್, ಗ್ರೂಪ್ ಆಡಿಟರ್ ಶ್ರೀ. ಮನೋಜ್ ಅಗ್ರವಾಲ್, NAFCS ಡೈರೆಕ್ಟರ್ ಶ್ರೀ. ಸುಭಾಷ್ ಗುಪ್ತಾ ಹಾಗೂ ಶ್ರೀ. ಪ್ರಮೋದ ಕರ್ನಾಡ್ ಅವರು ಸಂಸ್ಥೆಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸಂಸ್ಥೆಯ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ. ಸುರೇಶ ಮಾನೆ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ. ಶೇಖರ ಪಾಟೀಲ ಪ್ರಶಸ್ತಿ ಸ್ವೀಕರಿಸಿದರು.

ಸಂಸ್ಥೆಯ ಸಂಸ್ಥಾಪಕರು ಹಾಗೂ ಚಿಕ್ಕೋಡಿ ಮಾಜಿ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹ ಸಂಸ್ಥಾಪಕರು, ಮಾಜಿ ಸಚಿವರು ಹಾಗೂ ನಿಪಾಣಿ ಶಾಸಕಿಯರಾದ ಸೌ. ಶಶಿಕಲಾ ಅಣ್ಣಾಸಾಹೇಬ ಜೊಲ್ಲೆಯವರು ಮಾತನಾಡಿ, ಪ್ರತಿಷ್ಠಿತ ಜೊಲ್ಲೆ ಗ್ರೂಪ್‌ನ ಮಾತೃ ಸಂಸ್ಥೆ ಶ್ರೀ ಬೀರೇಶ್ವರ ಸೊಸೈಟಿಯು ಇಂದು 3 ಲಕ್ಷ 89 ಸಾವಿರಕ್ಕೂ ಅಧಿಕ ಸದಸ್ಯರು, 3925 ಕೋಟಿ ಠೇವು, 2989 ಕೋಟಿ ಸಾಲ ಮುಂಗಡ ಹಾಗೂ 4556 ಕೋಟಿ ದುಡಿಯುವ ಬಂಡವಾಳ ಹೊಂದಿ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ 219 ಶಾಖೆಗಳೊಂದಿಗೆ ತನ್ನ ಕಾರ್ಯಕ್ಷೇತ್ರ ವಿಸ್ತರಿಸಿ, ಜನಮನ್ನಣೆ ಗಳಿಸಿದ ಸಂಸ್ಥೆ ಇಂದು ದೇಶಾದ್ಯಂತ ಹೆಸರುವಾಸಿಯಾಗಿದೆ. ಈ ಪ್ರಶಸ್ತಿಯು, ಸುಭದ್ರ ಸಂಸ್ಥೆಯ ಪಾರದರ್ಶಕ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

# ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಶ್ರೀ. ಆರ್. ಸಿ. ಚೌಗಲಾ ಅವರಿಗೆ ಸನ್ಮಾನ



ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಯಕ್ಸಂಬಾ (ಮಲ್ಟಿ -ಸ್ಟೇಟ್) ಸಂಸ್ಥೆಯಲ್ಲಿ 23 ವರ್ಷಗಳಿಂದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರವೀಂದ್ರ ಚೌಗಲಾ ಅವರು ನಿವೃತ್ತಿ ಹೊಂದಿದ ನಿಮಿತ್ಯ ಅವರನ್ನು ಜೊಲ್ಲೆ ಗ್ರೂಪ್ ಸಂಸ್ಥಾಪಕರು ಹಾಗೂ ಮಾಜಿ ಸಂಸದರಾದ ಶ್ರೀ. ಅಣ್ಣಾ ಸಾಹೇಬ ಜೊಲ್ಲೆ, ಹಾಗೂ ನಿಪ್ಪಾಣಿ ಶಾಸಕರಾದ, ಜೊಲ್ಲೆ ಗ್ರೂಪ್ ಸಹ ಸಂಸ್ಥಾಪಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಸಂಸ್ಥೆಯ ಅಧ್ಯಕ್ಷರು ಉಪಾಧ್ಯಕ್ಷರು ಸನ್ಮಾನಿಸಿದರು.

ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಅವರು ಮಾತನಾಡುತ್ತ, 1991ರಲ್ಲಿ ಗ್ರಾಮ ದೇವರಾದ ಶ್ರೀ ಬೀರೇಶ್ವರ ಹೆಸರಿನಲ್ಲಿ ಪ್ರಾರಂಭವಾದ ಸಂಸ್ಥೆ ಇಂದು ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯದಲ್ಲಿ 219 ಶಾಖೆಗಳನ್ನು ಹೊಂದಿದೆ. ಪ್ರಧಾನ ವ್ಯವಸ್ಥಾಪಕರಾದ ರವೀಂದ್ರ ಚೌಗಲಾ ಅವರು ಸಂಸ್ಥೆಯ ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಅವರ ಸಾಧನೆಯನ್ನು ಕೊಂಡಾಡಿ ಅವರನ್ನು ಸತ್ಕರಿಸಿ ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಪ್ರಧಾನ ವ್ಯವಸ್ಥಾಪಕರಾದ ಶ್ರೀ ರವೀಂದ್ರ ಚೌಗಲಾ ಮಾತನಾಡಿ ಸಂಸ್ಥೆಯಲ್ಲಿ 23 ವರ್ಷ ಸೇವೆ ಸಲ್ಲಿಸಿದ್ದು, ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ, ಹಾಗೂ ಸೌ. ಶಶಿಕಲಾ ಜೊಲ್ಲೆ ಅವರು ನನ್ನನ್ನು ತಮ್ಮ ಕುಟುಂಬ ಸದಸ್ಯರಂತೆ ಕಂಡಿದ್ದು, ಅವರಿಗೆ ನಾನು ಸದಾ ಚಿರಋಣಿಯಾಗಿದ್ದೇನೆ.

ಈ ಸಂದರ್ಭದಲ್ಲಿ ಬೀರೇಶ್ವರ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಯಾನಂದ ಜಾಧವ, ಉಪಾಧ್ಯಕ್ಷರಾದ ಶ್ರೀ ಸಿದ್ರಾಮ ಗಡದೆ, ಜ್ಯೋತಿ ಸಂಸ್ಥೆಯ ಹಾಗೂ ಓ.ಜಿ.ಸಿ.ಎಸ್.ನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿ ಸದಸ್ಯರು, ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಾಷ್ಟ್ರೀಯ ಏಕತಾ ದಿನ-2024

1947 ರಿಂದ 1950 ರವರೆಗೆ ಭಾರತದ ಮೊದಲ ಉಪ ಪ್ರಧಾನ ಮಂತ್ರಿ ಮತ್ತು ಭಾರತದ ಮೊದಲ ಗೃಹ ಮಂತ್ರಿಯಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ನೆನಪಿಗಾಗಿ ಪ್ರತಿ ವರ್ಷ ಅಕ್ಟೋಬರ್ 31 ರಂದು ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ, "ಭಾರತದ ಉಕ್ಕಿನ ಮನುಷ್ಯ" ಎಂದು ಪ್ರಸಿದ್ಧವಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 147 ನೇ ಜನ್ಮದಿನವನ್ನು ಆಚರಿಸಲಾಯಿತು. ಅವರು ವಕೀಲರು, ರಾಜಕೀಯ ನಾಯಕರು ಮತ್ತು ದೇಶದ ಪ್ರಗತಿಗಾಗಿ ಜನರ ಏಕತೆಯನ್ನು ನಂಬಿದ ರಾಜಕಾರಣಿ. ಭಾರತದ ಸ್ವಾತಂತ್ರ್ಯ ಮತ್ತು ಏಕತೆಗೆ ಅವರ ಕೊಡುಗೆಯನ್ನು ಗುರುತಿಸಲು ಈ ದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರೀಯ ಏಕತಾ ದಿನಾಚರಣೆಯ ಹಿಂದಿನ ಪ್ರಮುಖ ಕಾರಣವೆಂದರೆ ರಾಷ್ಟ್ರದ ಏಕತೆಯನ್ನು ಹೆಚ್ಚಿಸುವುದು ಮತ್ತು ದೇಶಕ್ಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸುವುದು.

**ರಾಷ್ಟ್ರೀಯ ಏಕತಾ ದಿನದ ಇತಿಹಾಸ**

ಭಾರತದಲ್ಲಿ ರಾಷ್ಟ್ರೀಯ ಏಕತಾ ದಿನವನ್ನು ಏಕೆ ಆಚರಿಸಲಾಗುತ್ತದೆ ಎಂದು ಹಲವರು ಪ್ರಶ್ನಿಸುತ್ತಾರೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದಂದು ಅವರಿಗೆ ಗೌರವ ಸಲ್ಲಿಸಲು ಮತ್ತು ಅವರ ಅಪಾರ ಕೊಡುಗೆಗಳನ್ನು ಗುರುತಿಸಲು ಭಾರತ ಸರ್ಕಾರವು 2014 ರಲ್ಲಿ ಮೊದಲ ದಿನವನ್ನು ಪರಿಚಯಿಸಿತು. ಪ್ರಧಾನಿ ನರೇಂದ್ರ ಮೋದಿ ಅವರು ಹೊಸದಿಲ್ಲಿಯಲ್ಲಿ "ಏಕತೆಗಾಗಿ ಓಟ" ಎಂಬ ವಿಷಯದೊಂದಿಗೆ ಮೊದಲ ರಾಷ್ಟ್ರೀಯ ಏಕತಾ ದಿವಸ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭಾರತವು ವಿವಿಧ ಸಂಸ್ಕೃತಿಗಳು, ಸಂಪ್ರದಾಯಗಳು, ಧರ್ಮಗಳು ಮತ್ತು ಭಾಷೆಗಳ ಶ್ಲಾಘನೀಯ ಸಂಯೋಜನೆಯನ್ನು ನಾವು ಕಾಣುವ ನೆಲವಾಗಿದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇಶವನ್ನು ರಾಜಪ್ರಭುತ್ವದ ರಾಜ್ಯಗಳು ಮತ್ತು ಬ್ರಿಟಿಷ್ ಇಂಡಿಯಾಗಳಾಗಿ ವಿಭಜಿಸಿದಾಗ ಏಕತೆಯ ಕಲ್ಪನೆಯನ್ನು ಪ್ರಚಾರ ಮಾಡಿದರು. ದಿನವನ್ನು ಆಚರಿಸುವುದು ರಾಷ್ಟ್ರಕ್ಕೆ ಏಕತೆ, ಸಮಗ್ರತೆ ಮತ್ತು ಭದ್ರತೆಯನ್ನು ರೂಪಿಸಲು ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವವನ್ನು ಒದಗಿಸುತ್ತದೆ.

**ರಾಷ್ಟ್ರೀಯ ಏಕತಾ ದಿನದ ಥೀಮ್ 2024**

ರಾಷ್ಟ್ರೀಯ ಏಕತಾ ದಿನದ ಥೀಮ್ 2024 ಅನ್ನು ಇನ್ನೂ ಅಧಿಕೃತವಾಗಿ ಘೋಷಿಸಲಾಗಿಲ್ಲ. ಈ ದಿನವನ್ನು ಅಕ್ಟೋಬರ್ 31 ರಂದು ಆಚರಿಸಲಾಗುತ್ತದೆ, ಸ್ವಾತಂತ್ರ್ಯದ ನಂತರ ದೇಶವನ್ನು ಒಂದುಗೂಡಿಸುವಲ್ಲಿ ಅವರ ಪ್ರಮುಖ ಪಾತ್ರಕ್ಕಾಗಿ "ಭಾರತದ ಉಕ್ಕಿನ ಮನುಷ್ಯ" ಎಂದೂ ಕರೆಯಲ್ಪಡುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನವನ್ನು ಸ್ಮರಿಸಲಾಗುತ್ತದೆ. ಈ ದಿನವನ್ನು ರನ್ ಫಾರ್ ಯೂನಿಟಿ, ಪ್ರತಿಜ್ಞೆ ಸಮಾರಂಭಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಉತ್ತೇಜಿಸುವ ಶೈಕ್ಷಣಿಕ ಕಾರ್ಯಕ್ರಮಗಳಂತಹ ಚಟುವಟಿಕೆಗಳಿಂದ ಗುರುತಿಸಲಾಗಿದೆ.

# ಭಾರತೀಯ ವಾಯುಪಡೆಯ ದಿನ

ಭಾರತೀಯ ವಾಯುಪಡೆಯ ದಿನವನ್ನು ಅಕ್ಟೋಬರ್ 8 ರಂದು ಆಚರಿಸಲಾಗುತ್ತದೆ, 1932 ರಲ್ಲಿ IAF ಸ್ಥಾಪನೆಯನ್ನು ನೆನಪಿಸುತ್ತದೆ. ಈ ವರ್ಷದ ಥೀಮ್ ಸ್ವಾವಲಂಬನೆ ಮತ್ತು ಆಧುನೀಕರಣವನ್ನು ಒತ್ತಿಹೇಳುತ್ತದೆ. ಪ್ರಮುಖ ಘಟನೆಗಳು ಚೆನ್ನೈನ ಮರೀನಾ ಬೀಚ್‌ನಲ್ಲಿ IAF ಸಿಬ್ಬಂದಿಯ ಸಾಮರ್ಥ್ಯ ಮತ್ತು ಶೌರ್ಯವನ್ನು ಪ್ರದರ್ಶಿಸುವ ಭವ್ಯವಾದ ಏರ್ ಶೋ ಮತ್ತು ಪರೇಡ್ ಅನ್ನು ಒಳಗೊಂಡಿವೆ.

ಭಾರತೀಯ ವಾಯುಪಡೆ ದಿನವನ್ನು 8 ಅಕ್ಟೋಬರ್ 2024 ರಂದು ಆಚರಿಸಲಾಗುತ್ತದೆ, ಇದು IAF-ಭಾರತೀಯ ವಾಯುಪಡೆಯ 92 ನೇ ವರ್ಷವಾಗಿರುತ್ತದೆ. ಈ ದಿನ, 1932 ರಲ್ಲಿ, IAF ಅನ್ನು ಮೊದಲು ಸ್ಥಾಪಿಸಲಾಯಿತು ಮತ್ತು ಇದು ತಮ್ಮ ದೇಶವನ್ನು ಕಾಪಾಡಲು ಸಮವಸ್ತ್ರ ಮತ್ತು ಫ್ಲೈಯರ್‌ಗಳ ಪುರುಷರ ತ್ಯಾಗವನ್ನು ಗೌರವಿಸುತ್ತದೆ.

**2024 ರ ಥೀಮ್**

ಭಾರತೀಯ ವಾಯು ಸೇನೆ – ಸಕ್ಷಮ್, ಸಶಕ್ತ್, ಆತ್ಮನಿರ್ಭರ್ ಈ ವರ್ಷದ ಥೀಮ್ ಇದು ಪ್ರಬಲ, ಶಕ್ತಿಯುತ ಮತ್ತು ಸ್ವಾವಲಂಬಿ ಪದಗಳಾಗಿ ಅನುವಾದಿಸುತ್ತದೆ. ಐಎಎಫ್‌ನ ಸ್ವಾವಲಂಬನೆ ಮತ್ತು ಆಧುನೀಕರಣದ ವಿಷಯವು ಮಾತನಾಡುತ್ತದೆ. ಭಾರತವು ಅಸಾಧಾರಣ ರಕ್ಷಣಾ ಸಾಮರ್ಥ್ಯವನ್ನು ಹೊಂದಿರುವ ದೂರಗಾಮಿ ದೃಷ್ಟಿಯನ್ನು ಪ್ರತಿಧ್ವನಿಸುತ್ತದೆ.

ಭಾರತೀಯ ವಾಯುಪಡೆ ದಿನ 2024 ರ ಮುಖ್ಯ ಆಚರಣೆಗಳು ಚೆನ್ನೈನ ಮರೀನಾ ಬೀಚ್‌ನಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ವೈಮಾನಿಕ ಪ್ರದರ್ಶನದೊಂದಿಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಮತ್ತು ಇತರ ಮಿಲಿಟರಿ ಮತ್ತು ನಾಗರಿಕ ಗಣ್ಯರು ಪ್ರಮುಖ ಆಹ್ವಾನಿತರಾಗಿದ್ದರು.

ಅಕ್ಟೋಬರ್ 8 ರಂದು ಆಚರಿಸಲಾಗುವ ಭಾರತೀಯ ವಾಯುಪಡೆಯ ದಿನ 2024 ಕ್ಕೆ ಯೋಜಿಸಲಾದ ಮುಖ್ಯ ಕಾರ್ಯಕ್ರಮಗಳು ಚೆನ್ನೈನ ಮರೀನಾ ಬೀಚ್‌ನಲ್ಲಿ ನಡೆದವು

ಏರ್ ಶೋ: ಸುಧಾರಿತ ಫೈಟರ್ ಜೆಟ್‌ಗಳು, ಸಾರಿಗೆ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಪ್ರದರ್ಶಿಸುವ, ಅವುಗಳ ಸಾಮರ್ಥ್ಯ ಮತ್ತು ಚುರುಕುತನವನ್ನು ಪ್ರದರ್ಶಿಸುವ ಅದ್ಭುತ ವೈಮಾನಿಕ ಪ್ರದರ್ಶನವನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ನಿಗದಿಪಡಿಸಲಾಗಿತ್ತು.

ಗ್ರ್ಯಾಂಡ್ ಪೆರೇಡ್: ಆಚರಣೆಗಳು IAF ಸಿಬ್ಬಂದಿಗಳನ್ನು ಒಳಗೊಂಡ ಭವ್ಯವಾದ ಮೆರವಣಿಗೆಯನ್ನು ಒಳಗೊಂಡಿತ್ತು, ಅವರ ಶಿಸ್ತು ಮತ್ತು ವೃತ್ತಿಪರತೆಯನ್ನು ಎತ್ತಿ ತೋರಿಸುತ್ತದೆ

ಗಣ್ಯರು: ರಕ್ಷಣಾ ಸಚಿವ ರಾಜನಾಥ್ ಸಿಂಗ್, ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಮತ್ತು ಏರ್ ಚೀಫ್ ಮಾರ್ಷಲ್ ಎಪಿ ಸಿಂಗ್ ಮುಂತಾದ ಪ್ರಮುಖರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

2024 ರ ಥೀಮ್: "ಭಾರತೀಯ ವಾಯು ಸೇನೆ: ಸಕ್ಷಮ್, ಸಶಕ್ತ್, ಆತ್ಮನಿರ್ಭರ್" (ಸಮರ್ಥ, ಶಕ್ತಿಯುತ ಮತ್ತು ಸ್ವಾವಲಂಬಿ), ಇದು ರಕ್ಷಣಾ ಸಾಮರ್ಥ್ಯಗಳಲ್ಲಿ ಆಧುನೀಕರಣ ಮತ್ತು ಸ್ವಾವಲಂಬನೆಯ ಮೇಲೆ IAF ಗಮನವನ್ನು ಪ್ರತಿಬಿಂಬಿಸುತ್ತದೆ .


ಈ ಘಟನೆಗಳು ಭಾರತದ ವೈಮಾನಿಕ ಪರಾಕ್ರಮ ಮತ್ತು ತಾಂತ್ರಿಕ ಪ್ರಗತಿಯನ್ನು ಪ್ರದರ್ಶಿಸುವಾಗ IAF ಸಿಬ್ಬಂದಿಯ ಕೊಡುಗೆಗಳನ್ನು ಗೌರವಿಸುವ ಗುರಿಯನ್ನು ಹೊಂದಿವೆ.

ಭಾರತೀಯ ವಾಯುಪಡೆಯ ದಿನದ ಆಚರಣೆಯು ಕೆಚ್ಚೆದೆಯ ಸಿಬ್ಬಂದಿಗಳ ತ್ಯಾಗವನ್ನು ಗೌರವಿಸುವುದು ಮಾತ್ರವಲ್ಲದೆ ತನ್ನ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ಭಾರತದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. IAF ಆಧುನೀಕರಣ ಮತ್ತು ಹೊಂದಿಕೊಳ್ಳುವುದನ್ನು ಮುಂದುವರೆಸುತ್ತಿರುವುದರಿಂದ, ಈ ರೀತಿಯ ಘಟನೆಗಳು ಭವಿಷ್ಯದ ಪೀಳಿಗೆಗೆ ರಾಷ್ಟ್ರದ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಕೊಡುಗೆ ನೀಡಲು ಪ್ರೇರೇಪಿಸುತ್ತವೆ.




**ನಿಪ್ಪಾಣಿ ನಗರದಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ, 69 ನೇ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭಾಗವಹಿಸಿ, ನಿಪ್ಪಾಣಿಯ ಪ.ಪೂಜ್ಯ ಶ್ರೀ ಪ್ರಾಣಲಿಂಗ ಸ್ವಾಮಿಜಿ, ಹಾಗೂ ಪ.ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಭುವನೇಶ್ವರಿ ದೇವಿ ಹಾಗೂ ವಿವಿಧ ಸ್ಥಬ್ದ ಚಿತ್ರಗಳ ಮೆರವಣಿಗೆಗೆ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡುತ್ತಿರುವ ದೃಶ್ಯ.**

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ







**ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ ಇದರ ಖಡಕಲಾಟ ಗ್ರಾಮದ ಜ್ಯೋತಿ ಕ್ರೆಡಿಟ್ ಶಾಖೆಯನ್ನು ಪಿ.ಕೆ.ಪಿ.ಎಸ್‌ನ ಹೊಸ ಕಟ್ಟಡದಲ್ಲಿ ಸ್ಥಳಾಂತರ ಸಮಾರಂಭವನ್ನು ಶ್ರೀ.ಮ.ನಿ.ಪ್ರ.ಸ್ವ ಶಿವಬಸವ ಮಹಾಸ್ವಾಮಿಗಳು ಅಪ್ಪನವರ ಕುಮಾರೇಶ್ವರ ವಿರಕ್ತಮಠ ಖಡಕಲಾಟ ಇವರ ದಿವ್ಯ ಸಾನಿಧ್ಯದಲ್ಲಿ, ಆಶಾ ಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿ ಪ್ರಸಾದ ಜೊಲ್ಲೆ ಹಾಗೂ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾದ ವಿಶ್ವನಾಥ ಕಮತೆ, ಹಾಗೂ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಯಕ್ಸಂಬಾ ಇದರ ಉಪಾಧ್ಯಕ್ಷರಾದ ಬಾಬು ಮಾಳಿ ಹಾಗೂ ನಿರ್ದೇಶಕರಾದ ಕಲ್ಲಪ್ಪಾ ಭೀಮು ನಾಯಿಕ, ವಿಶ್ವನಾಥ ಪೆಟ್ಕರ, ಜಗದೀಶ ಹಿಂಗಲಜೆ, ಜಗದೀಶ ಜಾಧವ, ಗ್ರಾಮದ ಮುಖಂಡರು ಕಾರ್ಯಕರ್ತರು ಉದ್ಘಾಟಿಸುತ್ತಿರುವುದು.**




**ನಿಪ್ಪಾಣಿ ಕ್ಷೇತ್ರದ ಕೋಗನೋಳಿ ಪಟ್ಟಣದಲ್ಲಿ ಶ್ರೀ ಬಿರದೇವ ಜಾತ್ರೆಯ ನಿಮಿತ್ತ ಆಯೋಜಿಸಿದ ಭವ್ಯ ಎತ್ತಿನಗಾಡಿ ಹಾಗೂ ಕುದುರೆಗಾಡಿ ಶರ್ಯತ್ತು ಸ್ಪರ್ಧೆಗೆ ಚಿಕ್ಕೋಡಿ ಲೋಕಸಭೆ ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡಿದರು.**




**ಆಡಿ ಗ್ರಾಮದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಯವರು ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಭಾಗವಹಿಸಿ ಸತ್ಕಾರ ಸ್ವೀಕರಿಸುತ್ತಿರುವುದು.**


ಚಾಲನೆ ನೀಡುತ್ತಿರುವುದು

ಬಸವಜ್ಯೋತಿ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಶನ್ಸ ಕೋ-ಆಫ್ ಸೋಸಾಯಿಟಿ ನಿ., ಯಕ್ಸಂಬಾ ಇವರ ಸಂಯುಕ್ತಾಶ್ರಯದಲ್ಲಿ ಡ್ರೋನಗಳಿಂದ ಔಷಧ ಸಿಂಪಡಣೆ ಸೇವೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



ಚಾಲನೆ ನೀಡುತ್ತಿರುವುದು

ಶ್ರೀ ಬೀರೇಶ್ವರ ಸಂಸ್ಥೆಯ ಮುಖ್ಯ ಕಛೇರಿ ಆವರಣದಲ್ಲಿ ಭಾರತದ ನಂಬರ 1 ಬ್ರಾಂಡ್ ನಾದಬ್ರಹ್ಮ ಇಡ್ಲಿ ಸೆಂಟರ್ ಉದ್ಘಾಟನೆ ಸಮಾರಂಭವನ್ನು ಚಿಕ್ಕೋಡಿ ಚರಮೂರ್ತಿ ಮಠದ ಪ.ಪೂ.ಶ್ರೀ ಸಂಪಾದನಾ ಸ್ವಾಮೀಜಿಗಳು, ಹಾಗು ಸದಲಗಾ ಗೀತಾಶ್ರಮ ಮಠದ ಪ.ಪೂಜ್ಯ. ಶ್ರೀ ಶ್ರದ್ಧಾನಂದ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿ ಚಾಲನೆ ನೀಡುತ್ತಿರುವ ದೃಶ್ಯ.


ಹಾಪ್‌ಪಿಚ್ ಕ್ರಿಕೆಟ್ ಪಂದ್ಯಾವಳಿ

ನಿಪ್ಪಾಣಿ ಮತಕ್ಷೇತ್ರದ ಕುನ್ನೂರ ಗ್ರಾಮದಲ್ಲಿ ದಸರಾ ಹಬ್ಬದ ನಿಮಿತ್ತ ಬಸವಜ್ಯೋತಿ ಯೂಥ ಫೌಂಡೇಶನ ಕುನ್ನೂರ ವತಿಯಿಂದ ಆಯೋಜಿಸಿದ್ದ ಭವ್ಯ ಹಾಪ್‌ಪಿಚ್ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವ ದೃಶ್ಯ.



ಚಾಲನೆ ನೀಡುತ್ತಿರುವುದು


ಬೆಳಗಾವಿಯ ಐ.ಟಿ.ಸಿ.ವೆಲ್‌ಕಮ್ ಹೋಟೆಲ್‌ನಲ್ಲಿ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಟಿ.ಎ.ಪಿ.ಸಿ.ಎಂ.ಎಸ್. ನಿರ್ದೇಶಕರಿಗೆ, ಪಿ.ಎಲ್.ಡಿ. ಬ್ಯಾಂಕ್, ದಿ. ನಿಪ್ಪಾಣಿ ಕೋ ಆಫ್ ಇಂಡಸ್ಟ್ರಿಯಲ್ ಎಸ್ಟೇಟ್ ನಿರ್ದೇಶಕರಿಗೆ, ವೇದಗಂಗಾ ಎಫ್.ಪಿ.ಓ., ಕೃಷಿಪ್ರಿಯಾ ಮಹಿಳಾ ಎಫ್.ಪಿ.ಓ. ಬೇಡಕಿಹಾಳ ನಿರ್ದೇಶಕರಿಗೆ ದಂಪತಿ ಸಮೇತ 2 ದಿನದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಕ್ಕೆ ಜೊಲ್ಲೆ ದಂಪತಿಗಳು ಚಾಲನೆ ನೀಡುತ್ತಿರುವುದು.

## ಜೊಲ್ಲೆ ಗ್ರೂಪನ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರ 62ನೇ ಹುಟ್ಟುಹಬ್ಬದ ನಿಮಿತ್ಯ ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)ಇದರ ನೂತನ ಶಾಖೆಗಳ ಉದ್ಘಾಟನಾ ಸಮಾರಂಭದ ದೃಶ್ಯಗಳು.


ಶಾಖೆ:-ವಾಲ್ವೋಯಿ


ಶಾಖೆ:-ಸಿರಾ


ಶಾಖೆ:-ಸೊಲ್ಲಾಪುರ


ಶಾಖೆ:-ಯಲ್ಲಾಪುರ


ಶಾಖೆ:-ದಾಬಸ್‌ಪೇಟೆ


ಶಾಖೆ:-ಪಲುಸ

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ